**ದಿನಾಂಕಃ 10.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ. ಸಿ.ಎಂ.ಎ ವಕೀಲರಿಂದ–**

ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳನ್ನು ಓದಿ, ತಿಳಿದುಕೊಂಡು ಅದಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ. ಅದರಲ್ಲಿನ ಎಲ್ಲ ಸಂಗತಿಗಳು ಸತ್ಯವಾಗಿರುತ್ತವೆ. ಅದನ್ನು ನಾನೇ ಹೇಳಿ ಬರೆಸಿರುತ್ತೇನೆ.

1) ಪ್ರಥಮ ವರ್ತಮಾನ ವರದಿ, ಚಾರ್ಜ ಶೀಟ್, ಗುನ್ನಾ ಜಾಗೆ ಪಂಚನಾಮೆ, 2 ವಾಹನ ತಪಾಸಣಾ ವರದಿಗಳು, ಅರ್ಜಿದಾರರ ಗಾಯದ ಪ್ರಮಾಣ ಪತ್ರ, ಇವುಗಳ ಯಥಾವತ್ತು ನಕಲುಗಳನ್ನು ಹಾಜರಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ 6 ಎಂದು ಗುರುತಿಸಲಾಯಿತು.

2) ಭಾಗ್ಯವಂತಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯರು ಸೋಲಾಪೂರ ಆಸ್ಪತ್ರೆಗೆ ಕಳುಹಿಸಿಕೊಟ್ಟ ಪತ್ರ, ಡಿಸ್‌ಚಾರ್ಜ ಸಮ್ಮರಿ, ಎರಡು ಆಸ್ಪತ್ರೆಯ ಬಿಲ್‌ಗಳು (ಒಟ್ಟಾಗಿ), 22 ವೈದ್ಯಕೀಯ ಬಿಲ್ಲಿನ ಜೊತೆಗೆ ವೈದ್ಯರ ಸಲಹಾ ಚೀಟಿಗಳು (ಒಟ್ಟಾಗಿ), 4 ಆಂಬ್ಯುಲನ್ಸ ಬಿಲ್‌ಗಳು (ಒಟ್ಟಾಗಿ), ಮೂರು ಅರ್ಜಿದಾರರ ವೇತನ ಪ್ರಮಾಣ ಪತ್ರ (ಒಟ್ಟಾಗಿ), ಅರ್ಜಿದಾರರ ಸಿ.ಟಿ. ಸ್ಕ್ಯಾನ್ ವರದಿ, ಲಿವರ್ ಫಂಕ್ಷನ್ ಟೆಸ್ಟ್ ರಿಪೋರ್ಟ, ಅರ್ಜಿದಾರರ ಕಂಪ್ಲಿಟ್ ಬ್ಲಡ್ ಕಂ ರಿಪೋರ್ಟ್, ಅರ್ಜಿದಾರರ ವೆನಸ್ ಜಾಪ್ಲರ್ ಆಫ್ ಲೆಫ್ಟ್ ಲೊವರ್ ಲಿಂಬ್, ಅರ್ಜಿದಾರರ

**PW**–1

ಎಕ್ಸ್‌ರೆ ಆಫ್ ಪೆಲ್ವಿಸ್, ಅರ್ಜಿದಾರರ 5 ಲಿವರ್ ಫಂಕ್ಷನ್ ಬ್ಲಡ್ (ಒಟ್ಟಾಗಿ), ಯುರಿನ್ ಟೆಸ್ಟ್ ರಿಪೋರ್ಟ್ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–7 ರಿಂದ 19 ಎಂದು ತಕರಾರಿಗೆ ಗುರುತಿಸಲಾಯಿತು.

ಆರ್.ಸಿ ಪುಸ್ತಕ , ವಿಮೆ ಪಾಲಿಸಿ, ಚಾಲನಾ ಪರವಾನಿಗೆ, ಆಧಾರ ಕಾರ್ಡ ಇವುಗಳ ಝುರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

ಅರ್ಜಿಯಲ್ಲಿ ಕೇಳಿದಂತೆ ಆದೇಶ ಮಾಡಬೇಕಾಗಿ ವಿನಂತಿ.

**ಪಾಟೀ ಸವಾಲುಃ** 1 ನೇ ಎದುರುದಾರರ ಪರ ಶ್ರೀ. ಎನ್.ಆರ್.ಜಿ. ವಕೀಲರಿಂದ.

1 ನೇ ಎದುರುದಾರರ ಪರ ವಕೀಲರನ್ನು ಕೂಗಿಸಲಾಯಿತು. ಗೈರು ಹಾಜರು ಇರುತ್ತಾರೆ. ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ** 2 ನೇ ಎದುರುದಾರರ ಪರ ಶ್ರೀ. ಎಸ್.ಎಸ್.ಎಂ. ವಕೀಲರಿಂದ.

ಪಾಟಿ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ